ಆ) ಹಾಗಿದ್ದಲ್ಲಿ ಸರ್ಕಾರ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಸಂಬಂಧಪಟ್ಟ ಅಧಿಕಾರಿಗಳಿಗೆ ಹಾಸ್ಟೆಲ್‌ಗಳಲ್ಲಿ 3 ಮತ್ತು 4ನೇ ತರಗತಿಯಲ್ಲಿ ಓದುತ್ತಿರುವ ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳಬೇಕೆಂದು ಆದೇಶ ನೀಡುವುದೇ?

ಶ್ರೀ ಬಿ. ಶಿವಣ್ಣ (ಸಮಾಜ ಕಲ್ಯಾಣ ಸಚಿವರು):

ಅ) ಹೌದು.

ಆ) 3 ಮತ್ತು 4ನೇ ದರ್ಜೆಯ ಬಾಲಕರು ತಮ್ಮ ಸೌಕರ್ಯಗಳನ್ನು ತಮಗೆ ತಾವೇ ನೋಡಿಕೊಳ್ಳಲು ಅಸಾಧ್ಯವಿರುವುದರಿಂದ ಅವರನ್ನು ವಿದ್ಯಾರ್ಥಿನಿಲಯಕ್ಕೆ ಸೇರಿಸಲು ಸಾಧ್ಯವಿಲ್ಲ. ಹಿರಿಯ ವಿದ್ಯಾರ್ಥಿನಿಯರು ತಮ್ಮ ಕಿರಿಯ ವಿದ್ಯಾರ್ಥಿನಿಯರನ್ನು ಸಾಮಾನ್ಯವಾಗಿ ಚೆನ್ನಾಗಿ ನೋಡಿಕೊಳ್ಳುವುದರಿಂದ 3ನೇ ಮತ್ತು 4ನೇ ದರ್ಜೆಯ ಬಾಲಕಿಯರನ್ನು ವಿದ್ಯಾರ್ಥಿನಿಲಯಕ್ಕೆ ಸೇರಿಸಿಕೊಳ್ಳಲಾಗುವುದು. ಈ ಪ್ರವೇಶವು ವಸತಿನಿಲಯಗಳಲ್ಲಿ ಸ್ಥಳ ಖಾಲಿ ಇದ್ದಲ್ಲಿ ಮಾತ್ರ ಅನ್ವಯಿಸುತ್ತದೆ.

ಹರಿಜನ ಗಿರಿಜನ ಏಳಿಗೆಗೆ ಮೀಸಲಿಟ್ಟಿರುವ ಹಣದ ವಿವರ.

3767 - ಶ್ರೀ ಅಂಜನಮೂರ್ತಿ (ನೆಲಮಂಗಲ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1983 ರಿಂದ 1990ರವರೆಗೆ ಸರ್ಕಾರ ಹರಿಜನ ಗಿರಿಜನರ ಸರ್ವೋತೋಮುಖ ಏಳಿಗೆಗಾಗಿ ಎಷ್ಟು ಹಣ ಒದಗಿಸಲಾಗಿತ್ತು ಹಾಗೂ ಅದರಲ್ಲಿ ಎಷ್ಟು ಹಣ ಖರ್ಚು ಆಗಿದೆ
(ವರ್ಷವಾರು ಮಾಹಿತಿ ನೀಡುವುದು)

ಆ) ಈ ದಿಸೆಯಲ್ಲಿ ಒದಗಿಸಿದ ಹಣವನ್ನು ಕಾನೂನು ಬದ್ಧವಾಗಿ ಖರ್ಚು ಮಾಡದ ಅಧಿಕಾರಿಗಳ ಮೇಲೆ ಸರ್ಕಾರ ಏನು ಕ್ರಮ ಕೈಗೊಂಡಿದೆ?

ಶ್ರೀ ಬಿ. ಶಿವಣ್ಣ (ಸಮಾಜ ಕಲ್ಯಾಣ ಸಚಿವರು):

	ಒದಗಿಸಿದ ಹಣ (ಲಕ್ಷ	ಖರ್ಚಾದ ಹಣ ರೂ.ಗಳಲ್ಲಿ)
1983-84	9677.46	8399.96
1984-85	11211.68	11042.62
1985-86	11216.37	11003.07
1986-87	15979.03	13654.36
1987-88	14803.32	13120.76
1988-89	16011.79	13978.12
1989-90	17479.49	13506.44
1990-91	15542.21	14934.58

ಆ) ಇಂತಹ ಪ್ರಸಂಗಗಳು ಸರ್ಕಾರದ ಗಮನಕ್ಕೆ ಬಂದಿಲ್ಲ.